# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೩<br>**Part – III** | ಬೆಂಗಳೂರು, ಶುಕ್ರವಾರ ೦೭, ನವೆಂಬರ್, ೨೦೨೫ (ಕಾರ್ತಿಕಾ , ೧೬, ಶಕವರ್ಷ, ೧೯೪೭)<br>BENGALURU, FRIDAY 07, NOVEMBER, 2025 ( KARTHIKA , 16, SHAKAVARSHA, 1947) | ನಂ. ೬೯೭<br>**No. 697** |


## <u>ಕರ್ನಾಟಕ ಸರ್ಕಾರ</u>

ಸಂಖ್ಯೆ:**ನಅಇ 287 ಎಂಎಲ್‌ಆರ್ 2025**

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, **ದಿನಾಂಕ: 06/11/2025.**

## <u>ಅಧಿಸೂಚನೆ</u>

ಕರ್ನಾಟಕ ಪೌರಸಭೆಗಳ ಅಧಿನಿಯಮದ ಕಲಂ 11ರ ಉಪ ಕಲಂ (2) (3) (4) ಹಾಗೂ ಕಲಂ 42 (2ಎ) ರನ್ವಯ ಮತ್ತು ಸರ್ಕಾರದ ಮಾರ್ಗಸೂಚಿ ಸಂಖ್ಯೆ: ನಅಇ 65 ಎಂಎಲ್‌ಆರ್ 2020, ದಿನಾಂಕ 11-09-2020 ರಲ್ಲಿ ಸ್ಪಷ್ಟಪಡಿಸಿರುವಂತೆ ರಾಜ್ಯದಲ್ಲಿರುವ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ವಿವಿಧ ಪ್ರವರ್ಗಗಳ ಮೀಸಲಾತಿಯನ್ನು 9ನೇ ಅವಧಿಗೆ ನಿಗದಿಪಡಿಸಿ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 107 ಎಂಎಲ್‌ಆರ್ 2020 ನ್ನು ದಿನಾಂಕ: 08-10-2020 ರಂದು ಹೊರಡಿಸಲಾಗಿದೆ.

ಈ ಆದೇಶವನ್ನು ಪ್ರಶ್ನಿಸಿ ಶ್ರೀ ಅರ್.ಬಸವರಾಜು ಚನ್ನಗಿರಿ ರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 11566/2020 ನ್ನು ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ಈ ರಿಟ್ ಅರ್ಜಿ ಹಾಗೂ ಇದೇ ರೀತಿ ದಾಖಲಾಗಿದ್ದ ಇತರೆ ರಿಟ್ ಪ್ರಕರಣಗಳನ್ನು ಸೇರ್ಪಡೆಗೊಳಿಸಿ ದಿನಾಂಕ: 08-10-2020 ರ ಅಧಿಸೂಚನೆಗೆ ತಡೆಯಾಜ್ಞೆ ನೀಡಿರುತ್ತದೆ. ಈ ತಡೆಯಾಜ್ಞೆಯನ್ನು ಪ್ರಶ್ನಿಸಿ, ಸರ್ಕಾರದಿಂದ ರಿಟ್ ಅಪೀಲು ಸಂಖ್ಯೆ: 516/2020 ನ್ನು ದಾಖಲಿಸಲಾಗಿತ್ತು. ರಿಟ್ ಅಪೀಲು ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ; 21-10-2020 ರಂದು ಮಧ್ಯಂತರ ಆದೇಶ ನೀಡಿ, ದಿನಾಂಕ: 08-10-2020 ರ ಅಧಿಸೂಚನೆಯಂತೆ ರಾಜ್ಯದಲ್ಲಿರುವ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಗಳನ್ನು ದಿನಾಂಕ: 02-11-2020 ರೊಳಗಾಗಿ ನಡೆಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿರುತ್ತದೆ ಹಾಗೂ ದಿನಾಂಕ:05-11-2020 ರಂದು ಸರ್ಕಾರದ ಮೇಲ್ಮನವಿಯನ್ನು ಪರಿಗಣಿಸಿ ವಿಲೇ ಮಾಡಿರುತ್ತದೆ.

ಮಾನ್ಯ ನ್ಯಾಯಾಲಯದ ಮಧ್ಯಂತರ ಆದೇಶದನ್ವಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ದಿನಾಂಕ 08-10-2020 ರ ಅಧಿಸೂಚನೆಯನ್ನು ಅನುಸರಿಸಿ ರಾಜ್ಯದಲ್ಲಿರುವ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ 9ನೇ ಅವಧಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಗಳನ್ನು ಜರುಗಿಸಲಾಗಿರುತ್ತದೆ.

ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ: 19-11-2020 ರ ಆದೇಶದಲ್ಲಿ ರಿಟ್ ಅರ್ಜಿ ಸಂಖ್ಯೆ: 11566/2020 ನ್ನು ಅಂಗೀಕರಿಸಿ, ಸರ್ಕಾರದ ಆದೇಶ ದಿನಾಂಕ: 08-10-2020 ನ್ನು ವಜಾಗೊಳಿಸಿದ್ದು, ಈ ಆದೇಶದ ವಿರುದ್ಧ ಸರ್ಕಾರದಿಂದ ರಿಟ್ ಅಪೀಲು ಸಂಖ್ಯೆ: 551/2020 ನ್ನು ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ: 21-04-2021 ರಂದು ನೀಡಿರುವ ಆದೇಶದಲ್ಲಿ ಏಕಸದಸ್ಯ ಪೀಠದ ಆದೇಶವನ್ನು ವಜಾಗೊಳಿಸಿ ಆದೇಶಿಸಿರುತ್ತದೆ.

ರಿಟ್ ಅಪೀಲು ಸಂಖ್ಯೆ; 551/2021 ರ ಪ್ರಕರಣದಲ್ಲಿ ನೀಡಲಾದ ತೀರ್ಪಿನ ವಿರುದ್ಧ ಶ್ರೀ ಚಂದ್ರೇಗೌಡ ಹೆಚ್.ವಿ. ಮತ್ತಿತರರು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ. (ಸಿವಿಲ್) ಸಂಖ್ಯೆ: 7090/2021 ನ್ನು ದಾಖಲಿಸಿರುತ್ತಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣವು ವಿಚಾರಣೆಯ ಹಂತದಲ್ಲಿರುವಾಗ ಮಾನ್ಯ ನ್ಯಾಯಾಲಯದ ಆದೇಶದಂತೆ NIC ರವರು software ಮೂಲಕ ಸಿದ್ದಪಡಿಸಿ ಸಲ್ಲಿಸಿದ್ದ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಮೀಸಲಾತಿ ಪಟ್ಟಿಯನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ. ಮಾನ್ಯ ನ್ಯಾಯಾಲಯವು ದಿನಾಂಕ: 13-12-2022 ರಂದು ನೀಡಿರುವ ಆದೇಶದನ್ವಯ ರಾಜ್ಯದಲ್ಲಿರುವ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ 10ನೇ ಅವಧಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಮೀಸಲಾತಿಯನ್ನು ನಿಗದಿಪಡಿಸಿ ದಿನಾಂಕ: 05-08-2024 ರಂದು ಆದೇಶ ಹೊರಡಿಸಲಾಗಿದೆ.

ಮಾನ್ಯ ಉಚ್ಚ ನ್ಯಾಯಾಲಯ ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯಗಳ ಮುಂದೆ ಪ್ರಕರಣಗಳನ್ನು ಬಾಕಿ ಇದ್ದುದರಿಂದ, 10ನೇ ಅವಧಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ಮೀಸಲಾತಿಯನ್ನು ನಿಗದಿಪಡಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ, ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ಮೀಸಲಾತಿಯನ್ನು ನಿಗದಿಪಡಿಸುವವರೆಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ, ಕರ್ನಾಟಕ ಪುರಸಭೆಗಳ ಕಾಯ್ದೆ, 1964 ರ ಕಲಂ-315 ರನ್ವಯ ರಾಜ್ಯದಲ್ಲಿರುವ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸಲಾಗಿರುತ್ತದೆ.

ದಿನಾಂಕ: 05-08-2024 ರಂದು ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಅಧ್ಯಕ್ಷ/ಉಪಾಧ್ಯಕ್ಷ ಸ್ಥಾನಗಳಿಗೆ 10ನೇ ಅವಧಿಗೆ ಮೀಸಲಾತಿಯನ್ನು ನಿಗದಿಪಡಿಸಿ ಅಧಿಸೂಚನೆಯನ್ನು ಹೊರಡಿಸಿದ ನಂತರ ಅದರಂತೆ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಅಧ್ಯಕ್ಷ/ಉಪಾಧ್ಯಕ್ಷ ಸ್ಥಾನಗಳಿಗೆ 10ನೇ ಅವಧಿಯ ಚುನಾವಣೆಗಳು ಜರುಗಿಸಲಾಗಿರುತ್ತದೆ.

ಶ್ರೀ ಎಸ್.ಆರ್.ಮುರಳಿಗೌಡ ಮತ್ತಿತರರು, ಕೋಲಾರ ಇವರು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾಖಲಿಸಿರುವ ರಿಟ್ ಅರ್ಜಿ ಸಂಖ್ಯೆ: 27887/2025 ಹಾಗೂ ಇತರೆ ರಿಟ್ ಪ್ರಕರಣಗಳಲ್ಲಿ ಅರ್ಜಿದಾರರು ಆಡಳಿತಾಧಿಕಾರಿಗಳ ಅವಧಿಯನ್ನು ಹೊರತುಪಡಿಸಿ ಚುನಾಯಿತ ಆಡಳಿತ ಮಂಡಳಿಯ ಅವಧಿಯನ್ನು 05 ವರ್ಷಗಳಿಗೆ ಪರಿಗಣಿಸಿ, ವಿಸ್ತರಿಸುವಂತೆ ಕೋರಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ.

ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ: 27887/2025 ಮತ್ತು ಇತರೆ ರಿಟ್ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ನೀಡಿರುವ ಮಧ್ಯಂತರ ಆದೇಶಗಳಲ್ಲಿ ಈ ಕೆಳಕಂಡಂತೆ ಮಧ್ಯಂತರ ಆದೇಶ ನೀಡಿರುತ್ತದೆ:

> *"After hearing the learned counsel for the petitioners, it is ordered that till the expiry of the term of the respondent No.4 -Town Municipal Council, Periyapatna, the State Government shall not take any steps to appoint an Administrator under Section 315 of the Karnataka Municipalities Act, 1964 (for short, 'the Act, 1964').*

*The question whether the State Government is invested with the power under Section 315 of the Act, 1964 to appoint an Administrator in the facts and circumstances of the case is kept open. It is open for the State Government to seek modification of this order".*

ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರುಗಳ ಅವಧಿಗೆ ಸಂಬಂಧಿಸಿದಂತೆ ಕರ್ನಾಟಕ ಪುರಸಭೆಗಳ ಕಾಯ್ದೆ 1964 ರ ಕಲಂ 18 ಮತ್ತು Article 243-ಯು ಈ ಕೆಳಗಿನಂತೆ ಇರುತ್ತದೆ.

**Section 18 of the Karnataka Municipalities Act, 1964 reads as below:**

***Section 18:*** *Term of office of councilors elected at a general election shall be five years.*
*"(1A) The term of office of the councilor elected at a general election or nominated in clause (b) of sub-section (1) of section 11 shall commence on the date appointed for the first meeting of the municipal council.*

**Article 243-U of the Constitution of India reads as below:**

***243-U: Duration of Municipalities, etc.***
*(1)Every Municipality, unless sooner dissolved under any law for the time being in force, shall continue for five years from the date appointed for its first meeting and no longer: Provided that a Municipality shall be given a reasonable opportunity of being heard before its dissolution.*

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಪ್ರಸ್ತುತ ರಾಜ್ಯದಲ್ಲಿನ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಚುನಾಯಿತ ಕೌನ್ಸಿಲ್ ಅವಧಿಯು ಮುಕ್ತಾಯವಾಗುತ್ತಿದೆ. ಆದ್ದರಿಂದ ಕರ್ನಾಟಕ ಪೌರಸಭೆಗಳ ಕಾಯ್ದೆ 1964ರ ಕಲಂ-389 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅವಧಿ ಮುಕ್ತಾಯಗೊಂಡಿರುವ ಈ ಕೆಳಕಂಡ ಸ್ಥಳೀಯ ಸಂಸ್ಥೆಗಳಲ್ಲಿ ಹೊಸ ಚುನಾಯಿತ ಕೌನ್ಸಿಲ್ ಅಸ್ತಿತ್ವಕ್ಕೆ ಬರುವವರೆಗೂ ಅವುಗಳ ದಿನನಿತ್ಯದ ಕಾರ್ಯನಿರ್ವಹಣೆಗಾಗಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಆಡಳಿತ ಹಿತದೃಷ್ಟಿಯಿಂದ ಆಡಳಿತಾಧಿಕಾರಿಗಳನ್ನು ನೇಮಿಸಿ ಆದೇಶಿಸಿದೆ.

| ಕ್ರ. ಸಂ. | ನಗರ ಸ್ಥಳೀಯ ಸಂಸ್ಥೆಯ ಹೆಸರು | ಜಾರಿಗೆ ಬರುವ ದಿನಾಂಕದಿಂದ | ಆಡಳಿತಾಧಿಕಾರಿಯ ವಿವರ |
|---|---|---|---|
| **ನಗರಸಭೆ** | | | |
| 1. | ಗೋಕಾಕ್ ನಗರಸಭೆ | 18.10.2025 | ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆ |
| 2. | ಸಿಂಧನೂರು ನಗರಸಭೆ | 24.10.2025 | ಜಿಲ್ಲಾಧಿಕಾರಿ, ರಾಯಚೂರು ಜಿಲ್ಲೆ |
| 3. | ಹೊಸಕೋಟೆ ನಗರಸಭೆ | 30.10.2025 | ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 4. | ಕೊಳ್ಳೇಗಾಲ ನಗರಸಭೆ | 30.10.2025 | ಜಿಲ್ಲಾಧಿಕಾರಿ, ಚಾಮರಾಜನಗರ ಜಿಲ್ಲೆ |
| 5. | ಹರಿಹರ ನಗರಸಭೆ | 30.10.2025 | ಜಿಲ್ಲಾಧಿಕಾರಿ, ದಾವಣಗೆರೆ ಜಿಲ್ಲೆ |
| 6. | ಕೊಪ್ಪಳ ನಗರಸಭೆ | 30.10.2025 | ಜಿಲ್ಲಾಧಿಕಾರಿ, ಕೊಪ್ಪಳ ಜಿಲ್ಲೆ |
| 7. | ಕನಕಪುರ ನಗರಸಭೆ | 30.10.2025 | ಜಿಲ್ಲಾಧಿಕಾರಿ, ರಾಮನಗರ ಜಿಲ್ಲೆ |
| 8. | ಸಾಗರ ನಗರಸಭೆ | 30.10.2025 | ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ |
| 9. | ಉಡುಪಿ ನಗರಸಭೆ | 30.10.2025 | ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ |

| | | | |
|---|---|---|---|
| 10. | ಯಾದಗಿರಿ ನಗರಸಭೆ | 30.10.2025 | ಜಿಲ್ಲಾಧಿಕಾರಿ, ಯಾದಗಿರಿ ಜಿಲ್ಲೆ |
| 11. | ಶೋರಾಪುರ್ (ಸುರಪುರ್) ನಗರಸಭೆ | 30.10.2025 | ಜಿಲ್ಲಾಧಿಕಾರಿ, ಯಾದಗಿರಿ ಜಿಲ್ಲೆ |
| 12. | ಚಿಕ್ಕಬಳ್ಳಾಪುರ ನಗರಸಭೆ | 31.10.2025 | ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ |
| 13. | ಅರಸೀಕೆರೆ ನಗರಸಭೆ | 31.10.2025 | ಜಿಲ್ಲಾಧಿಕಾರಿ, ಹಾಸನ ಜಿಲ್ಲೆ |
| 14. | ಬಸವಕಲ್ಯಾಣ ನಗರಸಭೆ | 01.11.2025 | ಜಿಲ್ಲಾಧಿಕಾರಿ, ಬೀದರ್ ಜಿಲ್ಲೆ |
| 15. | ನಿಪ್ಪಾಣಿ ನಗರಸಭೆ | 01.11.2025 | ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆ |
| 16. | ಶಿಡ್ಲಘಟ್ಟ ನಗರಸಭೆ | 01.11.2025 | ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ |
| 17. | ಹಾವೇರಿ ನಗರಸಭೆ | 01.11.2025 | ಜಿಲ್ಲಾಧಿಕಾರಿ, ಹಾವೇರಿ ಜಿಲ್ಲೆ |
| 18. | ಮುಳಬಾಗಿಲು ನಗರಸಭೆ | 01.11.2025 | ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ |
| 19. | ರಾಬರ್ಟ್‌ಸನ್‌ಪೇಟ್ (ಕೆಜಿಎಫ್) ನಗರಸಭೆ | 01.11.2025 | ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ |
| 20. | ಹುಣಸೂರು ನಗರಸಭೆ | 01.11.2025 | ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ |
| 21. | ತಿಪಟೂರು ನಗರಸಭೆ | 01.11.2025 | ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ |
| 22. | ಶಿರಸಿ ನಗರಸಭೆ | 01.11.2025 | ಜಿಲ್ಲಾಧಿಕಾರಿ, ಉತ್ತರ ಕನ್ನಡ ಜಿಲ್ಲೆ |
| 23. | ಶಹಾಪುರ ನಗರಸಭೆ | 01.11.2025 | ಜಿಲ್ಲಾಧಿಕಾರಿ, ಉತ್ತರ ಕನ್ನಡ ಜಿಲ್ಲೆ |
| 24. | ಇಳಕಲ್ ನಗರಸಭೆ | 02.11.2025 | ಜಿಲ್ಲಾಧಿಕಾರಿ, ಬಾಗಲಕೋಟೆ ಜಿಲ್ಲೆ |
| 25. | ಗೌರಿಬಿದನೂರು ನಗರಸಭೆ | 02.11.2025 | ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ |
| 26. | ಚಿಂತಾಮಣಿ ನಗರಸಭೆ | 02.11.2025 | ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ |
| 27. | ಚಿತ್ರದುರ್ಗ ನಗರಸಭೆ | 02.11.2025 | ಜಿಲ್ಲಾಧಿಕಾರಿ, ಚಿತ್ರದುರ್ಗ ಜಿಲ್ಲೆ |
| 28. | ರಾಣೆಬೆನ್ನೂರು ನಗರಸಭೆ | 02.11.2025 | ಜಿಲ್ಲಾಧಿಕಾರಿ, ಹಾವೇರಿ ಜಿಲ್ಲೆ |
| 29. | ಕೋಲಾರ ನಗರಸಭೆ | 02.11.2025 | ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ |
| 30. | ಕಾರವಾರ ನಗರಸಭೆ | 02.11.2025 | ಜಿಲ್ಲಾಧಿಕಾರಿ, ಉತ್ತರ ಕನ್ನಡ ಜಿಲ್ಲೆ |
| 31. | ದಾಂಡೇಲಿ ನಗರಸಭೆ | 02.11.2025 | ಜಿಲ್ಲಾಧಿಕಾರಿ, ಉತ್ತರ ಕನ್ನಡ ಜಿಲ್ಲೆ |
| 32. | ಮುಧೋಳ ನಗರಸಭೆ | 03.11.2025 | ಜಿಲ್ಲಾಧಿಕಾರಿ, ಬಾಗಲಕೋಟೆ ಜಿಲ್ಲೆ |
| 33. | ಸಿರಗುಪ್ಪ ನಗರಸಭೆ | 03.11.2025 | ಜಿಲ್ಲಾಧಿಕಾರಿ, ಬಳ್ಳಾರಿ ಜಿಲ್ಲೆ |
| 34. | ಚಾಮರಾಜನಗರ ನಗರಸಭೆ | 03.11.2025 | ಜಿಲ್ಲಾಧಿಕಾರಿ, ಚಾಮರಾಜನಗರ ಜಿಲ್ಲೆ |
| 35. | ಪುತ್ತೂರು ನಗರಸಭೆ | 03.11.2025 | ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ |
| 36. | ಉಲ್ಲಾಳ ನಗರಸಭೆ | 03.11.2025 | ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ |
| 37. | ಗಂಗಾವತಿ ನಗರಸಭೆ | 03.11.2025 | ಜಿಲ್ಲಾಧಿಕಾರಿ, ಕೊಪ್ಪಳ ಜಿಲ್ಲೆ |
| 38. | ಮಂಡ್ಯ ನಗರಸಭೆ | 03.11.2025 | ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ |
| 39. | ನಂಜನಗೂಡು ನಗರಸಭೆ | 03.11.2025 | ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ |
| 40. | ಜಮಖಂಡಿ ನಗರಸಭೆ | 04.11.2025 | ಜಿಲ್ಲಾಧಿಕಾರಿ, ಬಾಗಲಕೋಟೆ ಜಿಲ್ಲೆ |
| 41. | ಚಳ್ಳಕೆರೆ ನಗರಸಭೆ | 04.11.2025 | ಜಿಲ್ಲಾಧಿಕಾರಿ, ಚಿತ್ರದುರ್ಗ ಜಿಲ್ಲೆ |
| 42. | ಹಿರಿಯೂರು ನಗರಸಭೆ | 05.11.2025 | ಜಿಲ್ಲಾಧಿಕಾರಿ, ಚಿತ್ರದುರ್ಗ ಜಿಲ್ಲೆ |

| ಪುರಸಭೆ | | | |
|---|---|---|---|
| 1. | ಅಂಕೋಲ ಪುರಸಭೆ | 13.10.2025 | ಉಪವಿಭಾಗಾಧಿಕಾರಿ, ಕುಮಟಾ ಉಪವಿಭಾಗ |
| 2. | ದೇವದುರ್ಗ ಪುರಸಭೆ | 18.10.2025 | ಉಪವಿಭಾಗಾಧಿಕಾರಿ, ರಾಯಚೂರು ಉಪವಿಭಾಗ |
| 3. | ಚಿಕ್ಕೋಡಿ ಪುರಸಭೆ | 20.10.2025 | ಉಪ ವಿಭಾಗಾಧಿಕಾರಿ, ಚಿಕ್ಕೋಡಿ ಉಪವಿಭಾಗ |
| 4. | ಕೊಣ್ಣೂರು ಪುರಸಭೆ | 20.10.2025 | ಉಪ ವಿಭಾಗಾಧಿಕಾರಿ, ಬೈಲಹೊಂಗಲ ಉಪವಿಭಾಗ |
| 5. | ಸದಲಗಾ ಪುರಸಭೆ | 22.10.2025 | ಉಪ ವಿಭಾಗಾಧಿಕಾರಿ, ಚಿಕ್ಕೋಡಿ ಉಪವಿಭಾಗ |
| 6. | ಮೂಡಲಗಿ ಪುರಸಭೆ | 24.10.2025 | ಉಪ ವಿಭಾಗಾಧಿಕಾರಿ, ಬೈಲಹೊಂಗಲ ಉಪವಿಭಾಗ |
| 7. | ಬೀರೂರು ಪುರಸಭೆ | 24.10.2025 | ಉಪವಿಭಾಗಾಧಿಕಾರಿ, ತರೀಕೆರೆ ಉಪವಿಭಾಗ |
| 8. | ಬಂಗಾರಪೇಟೆ ಪುರಸಭೆ | 24.10.2025 | ಉಪವಿಭಾಗಾಧಿಕಾರಿ, ಕೋಲಾರ ಉಪವಿಭಾಗ |
| 9. | ಮದ್ದೂರು ಪುರಸಭೆ | 24.10.2025 | ಉಪವಿಭಾಗಾಧಿಕಾರಿ, ಮಂಡ್ಯ ಉಪವಿಭಾಗ |
| 10. | ಮಳವಳ್ಳಿ ಪುರಸಭೆ | 24.10.2025 | ಉಪವಿಭಾಗಾಧಿಕಾರಿ, ಮಂಡ್ಯ ಉಪವಿಭಾಗ |
| 11. | ಪಾಂಡವಪುರ ಪುರಸಭೆ | 24.10.2025 | ಉಪವಿಭಾಗಾಧಿಕಾರಿ, ಪಾಂಡವಪುರ ಉಪವಿಭಾಗ |
| 12. | ಮುದಗಲ್ ಪುರಸಭೆ | 24.10.2025 | ಉಪವಿಭಾಗಾಧಿಕಾರಿ, ಲಿಂಗಸುಗೂರು ಉಪವಿಭಾಗ |
| 13. | ಸೊರಬ ಪುರಸಭೆ | 24.10.2025 | ಉಪವಿಭಾಗಾಧಿಕಾರಿ, ಸಾಗರ ಉಪವಿಭಾಗ |
| 14. | ರಾಮದುರ್ಗ ಪುರಸಭೆ | 28.10.2025 | ಉಪ ವಿಭಾಗಾಧಿಕಾರಿ, ಬೈಲಹೊಂಗಲ ಉಪವಿಭಾಗ |
| 15. | ಬೈಲಹೊಂಗಲ ಪುರಸಭೆ | 28.10.2025 | ಉಪ ವಿಭಾಗಾಧಿಕಾರಿ, ಬೈಲಹೊಂಗಲ ಉಪವಿಭಾಗ |
| 16. | ಸಂಕೇಶ್ವರ ಪುರಸಭೆ | 28.10.2025 | ಉಪ ವಿಭಾಗಾಧಿಕಾರಿ, ಬೆಳಗಾವಿ ಉಪವಿಭಾಗ |
| 17. | ಕುಷ್ಟಗಿ ಪುರಸಭೆ | 28.10.2025 | ಉಪ ವಿಭಾಗಾಧಿಕಾರಿ, ಕೊಪ್ಪಳ ಉಪವಿಭಾಗ |
| 18. | ಕಾರ್ಕಳ ಪುರಸಭೆ | 28.10.2025 | ಉಪ ವಿಭಾಗಾಧಿಕಾರಿ, ಕುಂದಾಪುರ ಉಪವಿಭಾಗ |
| 19. | ತಾಳಿಕೋಟೆ ಪುರಸಭೆ | 28.10.2025 | ಉಪವಿಭಾಗಾಧಿಕಾರಿ, ವಿಜಯಪುರ ಉಪವಿಭಾಗ |
| 20. | ಕಮಲಾಪುರ ಪುರಸಭೆ | 29.10.2025 | ಉಪವಿಭಾಗಾಧಿಕಾರಿ, ಹೊಸಪೇಟೆ ಉಪವಿಭಾಗ |
| 21. | ಹುಕ್ಕೇರಿ ಪುರಸಭೆ | 29.10.2025 | ಉಪ ವಿಭಾಗಾಧಿಕಾರಿ, ಬೆಳಗಾವಿ ಉಪವಿಭಾಗ |

| | | | |
|---|---|---|---|
| 22. | ಆನೇಕಲ್ ಪುರಸಭೆ | 30.10.2025 | ಉಪ ವಿಭಾಗಾಧಿಕಾರಿ, ಬೆಂಗಳೂರು ದಕ್ಷಿಣ ಉಪವಿಭಾಗ |
| 23. | ಶಿಗ್ಗಾಂವ್ ಪುರಸಭೆ | 30.10.2025 | ಉಪವಿಭಾಗಾಧಿಕಾರಿ, ಸವಣೂರು ಉಪವಿಭಾಗ |
| 24. | ಲಿಂಗಸುಗೂರು ಪುರಸಭೆ | 30.10.2025 | ಉಪ ವಿಭಾಗಾಧಿಕಾರಿ, ಲಿಂಗಸುಗೂರು ಉಪವಿಭಾಗ |
| 25. | ಇಂಡಿ ಪುರಸಭೆ | 30.10.2025 | ಉಪವಿಭಾಗಾಧಿಕಾರಿ, ಇಂಡಿ ಉಪವಿಭಾಗ |
| 26. | ಕೆ.ಆರ್.ಪೇಟೆ ಪುರಸಭೆ | 01.11.2025 | ಉಪ ವಿಭಾಗಾಧಿಕಾರಿ, ಪಾಂಡವಪುರ ಉಪವಿಭಾಗ |
| 27. | ಕಡೂರು ಪುರಸಭೆ | 03.11.2025 | ಉಪ ವಿಭಾಗಾಧಿಕಾರಿ, ತರೀಕೆರೆ ಉಪವಿಭಾಗ |
| 28. | ಹೂವಿನ ಹಡಗಲಿ ಪುರಸಭೆ | 03.11.2025 | ಉಪ ವಿಭಾಗಾಧಿಕಾರಿ, ಹರಪ್ಪನಹಳ್ಳಿ ಉಪವಿಭಾಗ |
| 29. | ಕುಶಾಲನಗರ ಪುರಸಭೆ | 04.11.2025 | ಉಪವಿಭಾಗಾಧಿಕಾರಿ, ಮಡಿಕೇರಿ ಉಪವಿಭಾಗ |
| 30. | ವಿರಾಜಪೇಟೆ ಪುರಸಭೆ | 04.11.2025 | ಉಪವಿಭಾಗಾಧಿಕಾರಿ, ಮಡಿಕೇರಿ ಉಪವಿಭಾಗ |
| 31. | ಸವದತ್ತಿ ಪುರಸಭೆ | 04.11.2025 | ಉಪ ವಿಭಾಗಾಧಿಕಾರಿ, ಬೈಲಹೊಂಗಲ ಉಪವಿಭಾಗ |
| 32. | ಸವಣೂರು ಪುರಸಭೆ | 04.11.2025 | ಉಪ ವಿಭಾಗಾಧಿಕಾರಿ, ಸವಣೂರು ಉಪವಿಭಾಗ |
| 33. | ಸಕಲೇಶಪುರ ಪುರಸಭೆ | 04.11.2025 | ಉಪ ವಿಭಾಗಾಧಿಕಾರಿ, ಸಕಲೇಶಪುರ ಉಪವಿಭಾಗ |
| 34. | ಚಿಕ್ಕನಾಯಕನಹಳ್ಳಿ ಪುರಸಭೆ | 04.11.2025 | ಉಪ ವಿಭಾಗಾಧಿಕಾರಿ, ತಿಪಟೂರು ಉಪವಿಭಾಗ |
| 35. | ಕುಂದಾಪುರ ಪುರಸಭೆ | 04.11.2025 | ಉಪ ವಿಭಾಗಾಧಿಕಾರಿ, ಕುಂದಾಪುರ ಉಪವಿಭಾಗ |
| 36. | ಹಳಿಯಾಳ ಪುರಸಭೆ | 04.11.2025 | ಉಪ ವಿಭಾಗಾಧಿಕಾರಿ, ಕಾರವಾರ ಉಪವಿಭಾಗ |
| 37. | ಸಿಂಧಗಿ ಪುರಸಭೆ | 04.11.2025 | ಉಪ ವಿಭಾಗಾಧಿಕಾರಿ, ಇಂಡಿ ಉಪವಿಭಾಗ |
| 38. | ಹುನಗುಂದ ಪುರಸಭೆ | 05.11.2025 | ಉಪವಿಭಾಗಾಧಿಕಾರಿ, ಬಾಗಲಕೋಟೆ ಉಪವಿಭಾಗ |
| 39. | ಸಂಡೂರು ಪುರಸಭೆ | 05.11.2025 | ಉಪವಿಭಾಗಾಧಿಕಾರಿ, ಬಳ್ಳಾರಿ ಉಪವಿಭಾಗ |
| 40. | ಹಳ್ಳಿಖೇಡ ಪುರಸಭೆ | 05.11.2025 | ಉಪ ವಿಭಾಗಾಧಿಕಾರಿ, ಬಸವಕಲ್ಯಾಣ ಉಪವಿಭಾಗ |
| 41. | ನವಲಗುಂದ ಪುರಸಭೆ | 05.11.2025 | ಉಪವಿಭಾಗಾಧಿಕಾರಿ, ಧಾರವಾಡ ಉಪವಿಭಾಗ |
| 42. | ಚನ್ನಗಿರಿ ಪುರಸಭೆ | 05.11.2025 | ಉಪವಿಭಾಗಾಧಿಕಾರಿ, ಹೊನ್ನಾಳಿ ಉಪವಿಭಾಗ |

| | | | |
|---|---|---|---|
| 43. | ಲಕ್ಷ್ಮೇಶ್ವರ ಪುರಸಭೆ | 05.11.2025 | ಉಪವಿಭಾಗಾಧಿಕಾರಿ, ಗದಗ ಉಪವಿಭಾಗ |
| 44. | ಮುಂಡರಗಿ ಪುರಸಭೆ | 05.11.2025 | ಉಪವಿಭಾಗಾಧಿಕಾರಿ, ಗದಗ ಉಪವಿಭಾಗ |
| 45. | ನರಗುಂದ ಪುರಸಭೆ | 05.11.2025 | ಉಪವಿಭಾಗಾಧಿಕಾರಿ, ಗದಗ ಉಪವಿಭಾಗ |
| 46. | ಮಧುಗಿರಿ ಪುರಸಭೆ | 05.11.2025 | ಉಪ ವಿಭಾಗಾಧಿಕಾರಿ, ಮಧುಗಿರಿ ಉಪವಿಭಾಗ |
| 47. | ಕುಮಟಾ ಪುರಸಭೆ | 05.11.2025 | ಉಪವಿಭಾಗಾಧಿಕಾರಿ, ಕುಮಟಾ ಉಪವಿಭಾಗ |
| 48. | ಕುಡಚಿ ಪುರಸಭೆ | 06.11.2025 | ಉಪ ವಿಭಾಗಾಧಿಕಾರಿ, ಚಿಕ್ಕೋಡಿ ಉಪವಿಭಾಗ |
| 49. | ಗುಂಡ್ಲುಪೇಟೆ ಪುರಸಭೆ | 06.11.2025 | ಉಪವಿಭಾಗಾಧಿಕಾರಿ, ಕೊಳ್ಳೇಗಾಲ ಉಪವಿಭಾಗ |
| 50. | ಹೊಳಲಕೆರೆ ಪುರಸಭೆ | 06.11.2025 | ಉಪ ವಿಭಾಗಾಧಿಕಾರಿ, ಚಿತ್ರದುರ್ಗ ಉಪವಿಭಾಗ |
| 51. | ಗಜೇಂದ್ರಗಡ ಪುರಸಭೆ | 06.11.2025 | ಉಪ ವಿಭಾಗಾಧಿಕಾರಿ, ಗದಗ ಉಪವಿಭಾಗ |
| 52. | ನಾಗಮಂಗಲ ಪುರಸಭೆ | 06.11.2025 | ಉಪವಿಭಾಗಾಧಿಕಾರಿ, ಪಾಂಡವಪುರ ಉಪವಿಭಾಗ |
| 53. | ಭಟ್ಕಳ ಪುರಸಭೆ | 06.11.2025 | ಉಪವಿಭಾಗಾಧಿಕಾರಿ, ಭಟ್ಕಳ ಉಪವಿಭಾಗ |
| **ಪಟ್ಟಣ ಪಂಚಾಯಿತಿ** | | | |
| 1. | ಕೆರೂರು ಪಟ್ಟಣ ಪಂಚಾಯಿತಿ | 20.10.2025 | ತಹಶೀಲ್ದಾರ್, ಬಾದಾಮಿ ತಾಲ್ಲೂಕು |
| 2. | ಬೀಳಗಿ ಪಟ್ಟಣ ಪಂಚಾಯಿತಿ | 24.10.2025 | ತಹಶೀಲ್ದಾರ್, ಬೀಳಗಿ ತಾಲ್ಲೂಕು |
| 3. | ಯಲಬುರ್ಗಾ ಪಟ್ಟಣ ಪಂಚಾಯಿತಿ | 24.10.2025 | ತಹಶೀಲ್ದಾರ್, ಯಲಬುರ್ಗಾ ತಾಲ್ಲೂಕು |
| 4. | ಕುಡುತಿನಿ ಪಟ್ಟಣ ಪಂಚಾಯಿತಿ | 28.10.2025 | ತಹಶೀಲ್ದಾರ್, ಬಳ್ಳಾರಿ |
| 5. | ಕೊಪ್ಪ ಪಟ್ಟಣ ಪಂಚಾಯಿತಿ | 29.10.2025 | ತಹಶೀಲ್ದಾರ್, ಕೊಪ್ಪ ತಾಲ್ಲೂಕು |
| 6. | ಶೃಂಗೇರಿ ಪಟ್ಟಣ ಪಂಚಾಯಿತಿ | 29.10.2025 | ತಹಶೀಲ್ದಾರ್, ಶೃಂಗೇರಿ ತಾಲ್ಲೂಕು |
| 7. | ತುರುವೇಕೆರೆ ಪಟ್ಟಣ ಪಂಚಾಯಿತಿ | 30.10.2025 | ತಹಶೀಲ್ದಾರ್, ತುರುವೇಕೆರೆ ತಾಲ್ಲೂಕು |
| 8. | ಗುಡಿಬಂಡೆ ಪಟ್ಟಣ ಪಂಚಾಯಿತಿ | 03.11.2025 | ತಹಶೀಲ್ದಾರ್, ಗುಡಿಬಂಡೆ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ |
| 9. | ಸಾಲಿಗ್ರಾಮ ಪಟ್ಟಣ ಪಂಚಾಯಿತಿ | 03.11.2025 | ತಹಶೀಲ್ದಾರ್, ಬ್ರಹ್ಮಾವರ ತಾಲ್ಲೂಕು |
| 10. | ಕೂಡ್ಲಗಿ ಪಟ್ಟಣ ಪಂಚಾಯಿತಿ | 03.11.2025 | ತಹಶೀಲ್ದಾರ್, ಕೂಡ್ಲಿಗಿ ತಾಲ್ಲೂಕು |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| | | | |
|---|---|---|---|
| 11. | ಯಳಂದೂರು ಪಟ್ಟಣ ಪಂಚಾಯಿತಿ | 04.11.2025 | ತಹಶೀಲ್ದಾರ್, ಯಳಂದೂರು ತಾಲ್ಲೂಕು |
| 12. | ಸೋಮವಾರಪೇಟೆ ಪಟ್ಟಣ ಪಂಚಾಯಿತಿ | 04.11.2025 | ತಹಶೀಲ್ದಾರ್, ಸೋಮವಾರಪೇಟೆ ತಾಲ್ಲೂಕು |
| 13. | ಹೊಸನಗರ ಪಟ್ಟಣ ಪಂಚಾಯಿತಿ | 04.11.2025 | ತಹಶೀಲ್ದಾರರು, ಹೊಸನಗರ ತಾಲ್ಲೂಕು |
| 14. | ರಾಯಬಾಗ್ ಪಟ್ಟಣ ಪಂಚಾಯಿತಿ | 05.11.2025 | ತಹಶೀಲ್ದಾರ್, ರಾಯಭಾಗ ತಾಲ್ಲೂಕು |
| 15. | ಖಾನಾಪುರ ಪಟ್ಟಣ ಪಂಚಾಯಿತಿ | 05.11.2025 | ತಹಶೀಲ್ದಾರ್, ಖಾನಾಪುರ ತಾಲ್ಲೂಕು |
| 16. | ಮೂಡಿಗೆರೆ ಪಟ್ಟಣ ಪಂಚಾಯಿತಿ | 05.11.2025 | ತಹಶೀಲ್ದಾರ್, ಮೂಡಿಗೆರೆ ತಾಲ್ಲೂಕು |
| 17. | ಅಳ್ನವರ ಪಟ್ಟಣ ಪಂಚಾಯಿತಿ | 05.11.2025 | ತಹಶೀಲ್ದಾರ್, ಅಳ್ನಾವರ ತಾಲ್ಲೂಕು |
| 18. | ಬೆಳ್ಳೂರು ಪಟ್ಟಣ ಪಂಚಾಯಿತಿ | 05.11.2025 | ತಹಶೀಲ್ದಾರ್, ನಾಗಮಂಗಲ ತಾಲ್ಲೂಕು |
| 19. | ಜೋಗಕಾರ್ಗಲ್ ಪಟ್ಟಣ ಪಂಚಾಯಿತಿ | 05.11.2025 | ತಹಶೀಲ್ದಾರರು, ಸಾಗರ ತಾಲ್ಲೂಕು |
| 20. | ಸುಳ್ಯ ಪಟ್ಟಣ ಪಂಚಾಯಿತಿ | 06.11.2025 | ತಹಶೀಲ್ದಾರ್, ಸುಳ್ಯ ತಾಲ್ಲೂಕು |
| 21. | ನರಗಲ್ ಪಟ್ಟಣ ಪಂಚಾಯಿತಿ | 06.11.2025 | ತಹಶೀಲ್ದಾರ್, ಗಜೇಂದ್ರಗಡ ತಾಲ್ಲೂಕು |
| 22. | ಆಲೂರು ಪಟ್ಟಣ ಪಂಚಾಯಿತಿ | 06.11.2025 | ತಹಶೀಲ್ದಾರ್, ಆಲೂರು ತಾಲ್ಲೂಕು |
| 23. | ಕೊರಟಗೆರೆ ಪಟ್ಟಣ ಪಂಚಾಯಿತಿ | 06.11.2025 | ತಹಶೀಲ್ದಾರ್, ಕೊರಟಗೆರೆ ತಾಲ್ಲೂಕು |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಟಿ.ಮಂಜುನಾಥ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಎಂಎ-1&3)

1.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH